**ಪಿ ಡಬ್ಲು 1**

**ದಿನಾಂಕಃ** 10-10-2025

**ಪ್ರಾರಂಭ ಸಮಯಃ** 12.33

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದ,**

ಈ ಪ್ರಕರಣದಲ್ಲಿ ನಾನು 1 ನೇ ಅರ್ಜಿದಾರಳಿರುತ್ತೇನೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಥಮ ವರ್ತಮಾನ ವರದಿ, ಪಿರ್ಯಾದಿ, ಘಟನಾ ಸ್ಥಳಕ್ಕೆ ಪಂಚನಾಮೆ, ನಕ್ಷೆ, ಮೋಟರ ಸೈಕಲ್ ಪಂಚನಾಮೆ, ಶವ ತನಿಖಾ ವರದಿ, ಪಿ ಎಂ ವರದಿ, ಐ ಎಂ ವಿ ವರದಿ, ಅಂತಿಮ ವರದಿ, ಮರಣ ಪ್ರಮಾಣ ಪತ್ರ ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ 10 ಎಂದು ಗುರುತಿಸಲಾಯಿತು. ಅದೇ ರೀತಿ ಅಟೆಸ್ಟೆಡ್ ಮಾಡಿದ ಜೆರಾಕ್ಸ ನ ಮೂರು ಆಧಾರ ಪ್ರತಿಗಳನ್ನು ಮತ್ತು ಅಟೆಸ್ಟೆಡ್ ಮಾಡಿದ ಜೆರಾಕ್ಸ ಪಡಿತರ ಚೀಟಿಯ ಪ್ರತಿಗಳನ್ನು ಹಾಜರುಪಡಿಸಿರುತ್ತೇನೆ. ಸದ್ರಿ ಸಾಕ್ಷಿ ಸದ್ರಿ ದಾಖಲೆಯ ಮೂಲ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಮೂಲ ದಾಖಲೆಯೊಂದಿಗೆ ಹೊಂದಾಣಿಕೆ ಮಾಡಿ ನೋಡಿ ಸರಿ ಇರುತ್ತದೆ. ಆದ್ದರಿಂದ ಅವುಗಳನ್ನು ಕ್ರಮವಾಗಿ ನಿಪಿ-11 ರಿಂದ ನಿಪಿ-14 ಎಂದು ಗುರುತಿಸಿ ಮೂಲ ದಾಖಲೆಗಳನ್ನು ಸಾಕ್ಷಿಗೆ ಹಿಂತಿರುಗಿಸಲಾಗಿರುತ್ತದೆ.

**ಆದ್ದರಿಂದ ಅರ್ಜಿಯನ್ನು ಪುರಸ್ಕರಿಸಬೇಕಾಗಿ ವಿನಂತಿ.**

**ಪಾಟೀ ಸವಾಲು : 1 ನೇ ಎದುರುದಾರ ಪರ ಶ್ರೀ ಜಿ ಎಮ್ ಎನ್, ಶ್ರೀ ವಿ ಎಫ್ ಜಿ ವಕೀಲರ ಪರವಾಗಿ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದರಿಂದ ಮೂಂದೂಡಲಾಯಿತು.**

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಸಹಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ**